## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

## ಸಿ. ಸಿ. ನಂ. 1196/2021

| | | | | |
|---|---|---|---|---|
| ಸಾಕ್ಷಿಧಾರರ ಹೆಸರು | : | ಅಬ್ದುಲಅತೀಪ ಗುಲಾಮಆಯಿಶಾ | ಪಿಡಬ್ಲ್ಯೂ | 3 |
| ತಂದೆ:ಗಂಡನ ಹೆಸರು | : | ಹಜರೆಸಾಬ | ಸಿಡಬ್ಲ್ಯೂ | 6 |
| ವಯಸ್ಸು | : | 52 ವರ್ಷ | | |
| ಉದ್ಯೋಗ | : | ವ್ಯವಸಾಯ | | |
| ವಾಸಸ್ಥಳ | : | ದರ್ಗಾ ಹಾನಗಲ್ಲ | | |

ದಿನಾಂಕ 21.12.2024 ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

### ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ

ಚಾಸಾ-1 ಮತ್ತು 4 ರಿಂದ 36 ರವರ ಪರಿಚಯ ಇದೆ. ದಿ: 26.03.2019 ರಂದು ಬೆಳಿಗ್ಗೆ 7.00 ಗಂಟೆ ಸುಮಾರಿಗೆ ಆರೋಪಿ ನಂ.1,3,4, ಅಲ್ತಾಪಹುಸೇನ ಮಕಾನದಾರ, ಶಕೀರಹ್ಮದ ಹುಲ್ಲತ್ತಿ, ಖಾಜಾಹುಸೇನ ಶಿರಸಿ, ಜೈನುಲ್ಲಾಬಿ, ಅನ್ವರಬಾಷಾ ಮಕಾನದಾರ, ವಗೈರೆಯವರು ಚಾಸಾ-1 ರವರೊಂದಿಗೆ ದರ್ಗಾದ ಚಾದರ ಹೊಚ್ಚುವ ಹಕ್ಕಿನ ಕುರಿತು ಜಗಳವಾಗಿತ್ತು. ಕಮಿಟಿಯವರಿಗೆ ಉಸ್ತುವರಿ ಮಾಡುವ ಹಕ್ಕು ಇತ್ತು. ಸರ್ವರಬಾಷಾ ಬಂದು ಸಿಟ್ಟಿನಿಂದ ಬೈಯುತ್ತಾ ಚಾಸಾ-1 ರವರಿಗೆ ಕಬ್ಬಿಣದ ರಾಡಿನಿಂದ ಹೊಡೆದರು. ಅವನು ಎಚ್ಚರ ತಪ್ಪಿ ಬಿದ್ದನು. ಅವನನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಸಾರ್ವಜನಿಕರು ಗಲಾಟೆ ಬಿಡಿಸಿದರು. ಹಾನಗಲ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಚಾಸಾ-1 ಈ ಕುರಿತು ದೂರು ಸಲ್ಲಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ 7 ಬಡಿಗೆ ಮತ್ತು 2 ಸಲಾಕೆಗಳನ್ನು ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು ಮಾ 1 ರಿಂದ 9 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

### : ಪಾಟೀ ಸವಾಲು : ಸಹಾಯಕ ಸರಕಾರಿ ಅಭಿಯೋಜಕರಿಂದ

ದಿನಾಂಕ: 25.03.2019 ರಂದು ಸಾಯಂಕಾಲ 7.00 ಗಂಟೆ ಸುಮಾರಿಗೆ ದರ್ಗಾದ ಉರುಸನುನ ದರ್ಗಾದ ಕುಟುಂಬದವರು ಮಾಡುತ್ತಿದ್ದರು ಎಂದರೆ ಸರಿ. ಆಗ ಮೆರವಣಿಗೆ ಮಾಡುತ್ತಿದ್ದರು ಎಂದರೆ ಸರಿ. ದಿ: 26.03.2019 ಬೆಳಿಗಿನ ಜಾವ 12.45 ಸುಮಾರಿಗೆ

ಆರೋಪಿತರು ಚಾಸಾ-1 ರವರ ಜೊತೆ ಜಗಳ ತೆಗೆದು ಕಬ್ಬಿಣದ ಸಲಾಕೆಯಿಂದ ಹೊಡೆದರು ಎಂದರೆ ಸರಿ. ಕಮಿಟಿ ಅಧ್ಯಕ್ಷ ಅಕ್ಕಿವಳ್ಳಿ ಮತ್ತು ನನಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. ಚಾಸಾ-1 ರವರಿಗೆ 1 ನೇ ಆರೋಪಿ ಮತ್ತು ಅಬ್ದುಲ್ ರೆಹಮಾನ ಸಲಾಕೆಯಿಂದ ಎದೆಗೆ, ತಲೆಗೆ ಮತ್ತು ಮೈ ಕೈ ಹೊಡೆದು ಗಾಯಗೊಳಿಸಿದರು ಮತ್ತು ಮೂಗಿನಿಂದ ರಕ್ತ ಸ್ರಾವ ಆಯಿತು ಎಂದರೆ ಸರಿ. ಆ ಸಮಯದಲ್ಲಿ ಕಬ್ಬಿಣದ ರಾಡನ್ನು ನನ್ನ ಕಡೆಗೆ ಎಸೆದರು ಅದರಿಂದ ನಾನು ತಪ್ಪಿಸಿಕೊಂಡೆ ಎಂದರೆ ಸರಿ. ಆಗ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿದರು ಎಂದರೆ ಸರಿ.

**ಪಾಟೀ ಸವಾಲು:1,3 ರಿಂದ 52 ಆರೋಪಿತರ ಪರ ಶ್ರೀ. ಐ ಕೆ ಹೆಚ್ ವಕೀಲರಿಂದ**

ನಾನು ಲೈಸೆನ್ಸ ಹೊಲ್ಡರ ಬಾಂಡ್ ರೈಟಿಂಗ್ ಕೆಲಸ ಮಾಡುತ್ತೇನೆ ಎಂದರೆ ಸರಿ. 1 ನೇ ಆರೋಪಿ ಮತ್ತು ವಂಶಸ್ಥರು ಖಾಯಂ ವಂಶ ಪಾರಂಪರಿಕವಾಗಿ ದರ್ಗಾದ ಮುತವಲಿ ಎಂದರೆ ಸರಿಯಲ್ಲ. ನಮ್ಮದು ಕಾನೂನು ಬಾಹಿರವಾದ ಕಮಿಟಿ ಎಂದರೆ ಸರಿಯಲ್ಲ. ನಮ್ಮ ಕಮಿಟಿಯನ್ನು ಹೈ ಕೊರ್ಟನಲ್ಲಿ ರದ್ದುಪಡಿಸಲಾಗಿದೆ ಎಂದರೆ ಸರಿಯಲ್ಲ. ಚಾಸಾ-1 ರವರು ಖಾಯಂ ತರೀಖವಾಗಿ ಸವಣೂರಿನಲ್ಲಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ದರ್ಗಾದ ಭಕ್ತಾದಿ ಎಂದರೆ ಸರಿಯಲ್ಲ. ಸರ್ವರಬಾಷಾ ಮಕಾನದಾರ, ಹಸನಬಾಷಾ, ಅನ್ವರಬಾಷಾ ಮಕಾನದಾರ ಇವರು ಚೀನಾಲಿ ಮಕ್ಕಳಾ ಇಲ್ಲಿ ನಿಂತು ಏನ ಮಾಡ್ತಿದೀರಾ, ನಿನ್ನ ತಾಯನಹಡಾ ಅಂತಾ ಬೈದರು. ಈಗ ಹೇಳಿದಂತೆ ಅವಾಚ್ಯ ಶಬ್ದಗಳನ್ನು ನನ್ನ ಹೇಳಿಕೆಯಲ್ಲಿ ಮರ್ಯಾದೆಗೋಸ್ಕರ ಹೇಳಿ ಬರೆಸಿಲ್ಲ. ಈ ರೀತಿ ಅವಾಚ್ಯ ಶಬ್ದಗಳಿಂದ ಆರೋಪಿತರು ಬೈದರು ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದರ್ಗಾಕ್ಕೆ ಹರಕೆ ತೀರಿಸಲು ಬರುತ್ತಾರೆ ಎಂದರೆ ಸರಿ. ದರ್ಗಾಕ್ಕೆ ಬಂದ ಆದಾಯದಿಂದ ಮಕಾನದಾರ ಕುಟುಂಬದವರು ಜೀವನ ಸಾಗಿಸುತ್ತಾರೆ ಎಂದರೆ ಸರಿಯಲ್ಲ. ದರ್ಗಾಕ್ಕೆ ಬರುವ ಚಿನ್ನ ಬೆಳ್ಳಿ ಹಣವನ್ನು ಕಬಳಿಸುವ ಉದ್ದೇಶದಿಂದ ಖೊಟ್ಟಿ ಕಮಿಟಿ ಸೃಷ್ಟಿಸಿಕೊಂಡಿದ್ದೇವು ಎಂದರೆ ಸರಿಯಲ್ಲ. ಸರ್ವರಬಾಷಾ ಕಬ್ಬಿಣದ ರಾಡಿನಿಂದ ಚಾಸಾ-1 ರವರಿಗೆ ಹೊಡೆದಿರುತ್ತಾರೆ. ಸರ್ವರಬಾಷಾ ಕಬ್ಬಿಣದ ರಾಡಿನಿಂದ ಚಾಸಾ-1 ರವರಿಗೆ ಹೊಡೆದಿರುತ್ತಾರೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಯಾವುದೇ ವಸ್ತುವಿನಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ಸಾಕಷ್ಟು ಜನ ಸೇರಿದ್ದರಿಂದ ಯಾರು ಯಾರು ದೊಣ್ಣೆ ಹಿಡಿದುಕೊಂಡಿದ್ದರು

ಹೇಳಲು ಬರುವುದಿಲ್ಲ. ಚಾಸಾ-1 ರವರ ರಕ್ತವಾದ ಬಟ್ಟೆಯನ್ನು ಪೋಲಿಸರಿಗೆ ನೀಡಿಲ್ಲ. ಯಾವುದೇ ಆರೋಪಿ ಚಾಸಾ-1 ರವರಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ದರ್ಗಾದ ಉರುಸು ಮಾಡುವ ಜವಾಬ್ದಾರಿ 1 ನೇ ಆರೋಪಿಯದು ಎಂದರೆ ಸರಿಯಲ್ಲ. ಓದಿಕೆ ಮಾಡುವುದು ಸಹ 1 ನೇ ಆರೋಪಿಯ ಕುಟುಂಬದ್ದು ಎಂದರೆ ಸರಿಯಲ್ಲ. ಚಾಸಾ-1 ರವರು ದೂರು ಸಲ್ಲಿಸಿರುತ್ತಾರೆ. ಸುಮಾರು 60 ಜನರ ಮೇಲೆ ದೂರನ್ನು ಸಲ್ಲಿಸಲಾಗಿದೆ. ಆ ದಿನ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮಾಡಿದ ಇನ್ನೊಂದು ಕೇಸು ಎಸ್ ಸಿ ನಂ. 61/2018, 60/2018 ರಲ್ಲಿ ನಾನು ಆರೋಪಿ ಇದ್ದೆ ಎಂದರೆ ಸರಿ. ಚಾಸಾ-1 ರವರಿಗೆ 1 ನೇ ಆರೋಪಿ ಬಡಿಗೆ ಮತ್ತು ಸಲಾಕೆಯಿಂದ ಹೊಡೆದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಲ್ತಾಪ ಇವರು ಅವಾಚ್ಯ ಶಬ್ದದಿಂದ ಬೈದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 2 ಆರೋಪಿ ಪರ ಶ್ರೀ. ಜಿ ಹೆಚ್ ಬಿ ವಕೀಲರಿಂದ**

2 ನೇ ಆರೋಪಿ ಪರ ವಕೀಲರು ಉಳಿದ ಆರೋಪಿ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್